ಗ್ರಾಮೀಣ ಅಭಿವೃದ್ಧಿ ರಸ್ತೆ ಕಾಮಗಾರಿ ಬಗ್ಗೆ

33(300): ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತೀರ್ಥಹಳ್ಳಿ ವಿಧಾನ ಸಭೆ ಕ್ಷೇತ್ರದ ವ್ಯಾಪ್ತಿಯಲ್ಲಿರುವ ತೀರ್ಥಹಳ್ಳಿ ಹೊಸನಗರ ಮತ್ತು ಶಿವಮೊಗ್ಗ ತಾಲ್ಲೂಕಿನಲ್ಲಿ ಎಷ್ಟು ಕಿ.ಮೀ ರಸ್ತೆ ಗ್ರಾಮೀಣಾಭಿವೃದ್ಧಿ ಇಲಾಖೆಗೆ ಸೇರಿದೆ (ಪೂರ್ಣ ವಿವರ ಒದಗಿಸುವುದು)

ಆ) ಈ ರಸ್ತೆಗಳಲ್ಲಿ ಪ್ರತ್ಯೇಕವಾಗಿ ಜಲ್ಲಿ ರಸ್ತೆ, ಟಾರ್ ರಸ್ತೆ ಮತ್ತು ಮಣ್ಣಿನ ರಸ್ತೆ ಎಷ್ಟು ಕಿ.ಮೀ. ಇದೆ? (ವಿವರ ನೀಡುವುದು);

ಇ) ಈ ರಸ್ತೆಗಳನ್ನು ಟಾರ್ ರಸ್ತೆಗಳನ್ನಾಗಿ ಮಾಡಲು ಸರ್ಕಾರವು ಯೋಜನೆ ರೂಪಿಸಿದೆಯೇ?

ಈ) ಈ ಎಲ್ಲಾ ರಸ್ತೆಗಳನ್ನು ಟಾರ್ ರಸ್ತೆ ಮಾಡಲು ತಗಲುವ ವೆಚ್ಚ ಎಷ್ಟು?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ತೀರ್ಥಹಳ್ಳಿ ವಿಧಾನ ಸಭೆ ಕ್ಷೇತ್ರದ ವ್ಯಾಪ್ತಿಯಲ್ಲಿರುವ ತೀರ್ಥಹಳ್ಳಿ 1449.90 ಕಿ.ಮೀ, ಹೊಸನಗರ 678.00 ಕಿ.ಮೀ. ಮತ್ತು ಶಿವಮೊಗ್ಗ 85.65 ಕಿ.ಮೀ ಉದ್ದದ ರಸ್ತೆ ಗ್ರಾಮೀಣಾಭಿವೃದ್ಧಿ ಇಲಾಖೆಗೆ ಸೇರಿದೆ.

ಆ)

(ಕಿ.ಮೀ.ಗಳಲ್ಲಿ

	ತೀರ್ಥಹಳ್ಳಿ	ಶಿವಮೊಗ್ಗ	ಹೊಸನಗರ	ಒಟ್ಟು
ಡಾಂಬರುರಸ್ತೆ	258.00	36.15	115.00	409.15
ಜಲ್ಲಿ ರಸ್ತೆ	511.90	19.35	128.00	659.25
ಮಣ್ಣಿನ ರಸ್ತೆ	680.00	30.15	435.00	1145.15
ಒಟ್ಟು	1449.90	85.65	678.00	2213.55

ಇ) ಈ ರಸ್ತೆಗಳನ್ನು ಟಾರ್ ಮಾಡಲು ಪ್ರತಿ ವರ್ಷ ವಿವಿಧ ಶೀರ್ಷಿಕೆಯಲ್ಲಿ (3054 ಮತ್ತು 5054) ಲಭ್ಯವಿರುವ ಅನುದಾನಕ್ಕೆ ತಕ್ಕಂತೆ

ಕ್ರಿಯಾ ಯೋಜನೆಯನ್ನು ಸರ್ಕಾರ/ಜಿ.ಪಂ ನಿಂದ ರೂಪಿಸಿ ಅನುಷ್ಠಾನ ಗೊಳಿಸಲಾಗುವುದು.

ಈ) ಜಲ್ಲಿ ರಸ್ತೆಯಿಂದ ಟಾರ್ ಮಾಡಲು ಶಿವಮೊಗ್ಗ ವಿಭಾಗಕ್ಕೆ (ತೀರ್ಥಹಳ್ಳಿ ಮತ್ತು ಶಿವಮೊಗ್ಗ ತಾಲ್ಲೂಕು) ಒಟ್ಟು ರೂ. 7969.00 ಲಕ್ಷಗಳು ಮತ್ತು ಸಾಗರ ವಿಭಾಗಕ್ಕೆ (ಹೊಸನಗರ) ರೂ.1920 ಲಕ್ಷಗಳು ಸೇರಿ ಒಟ್ಟು ರೂ. 9889.00 ಲಕ್ಷ ಬೇಕಾಗುತ್ತದೆಂದು ಅಂದಾಜಿಸಿದೆ.

ಅಂತೆಯೇ ಮಣ್ಣಿನ ರಸ್ತೆಯಿಂದ ಟಾರ್ ಮಾಡಲು ಅನುಕ್ರಮವಾಗಿ ರೂ.17754.00 ಲಕ್ಷಗಳು ಮತ್ತು ರೂ. 10875.00 ಲಕ್ಷಗಳು ಸೇರಿ ಒಟ್ಟು ರೂ.28629.00 ಲಕ್ಷಗಳು ಬೇಕಾಗುತ್ತದೆಂದು ಅಂದಾಜಿಸಿದೆ.

ಬಸವಕಲ್ಯಾಣ ಕ್ಷೇತ್ರದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ

34(297): ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ): ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಸವ ಕಲ್ಯಾಣ ಮತಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ಕುಡಿಯುವ ನೀರಿನ ಜ್ವಲಂತ ಸಮಸ್ಯೆಯ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಯಾವ ಯಾವ ಗ್ರಾಮಗಳು ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸುತ್ತಿವೆ?

ಇ) ಈ ಗ್ರಾಮಗಳಲ್ಲಿ ಕುಡಿಯುವ ನೀರಿನ ಸರಬರಾಜಿಗೆ ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ; ಕಳೆದ ಎರಡೂವರೆ ವರ್ಷಗಳಲ್ಲಿ ಬಸವಕಲ್ಯಾಣ ಮತ ಕ್ಷೇತ್ರಕ್ಕೆ ಕುಡಿಯುವ ನೀರಿನ ಸರಬರಾಜಿಗಾಗಿ ಸರ್ಕಾರ ಪ್ರತಿವರ್ಷ ಎಷ್ಟು ಹಣವನ್ನು ವೆಚ್ಚಮಾಡಿದೆ? (ಗ್ರಾಮವಾರು ವಿವರ ಒದಗಿಸುವುದು);

ಈ) ಪ್ರಸಕ್ತ ಸಾಲಿನಲ್ಲಿ ಈ ಕ್ಷೇತ್ರದ ಯಾವ ಯಾವ ಗ್ರಾಮಗಳಲ್ಲಿ ಕುಡಿಯುವ ನೀರಿನ ಯೋಜನೆಯನ್ನು ಕಾರ್ಯಗತಗೊಳಿಸಲಾಗುತ್ತಿದೆ ಮತ್ತು ಇದಕ್ಕಾಗಿ ವೆಚ್ಚ ಮಾಡುತ್ತಿರುವ ಹಣವೆಷ್ಟು?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು) :

ಅ) ಇಲ್ಲ.